11. The E.M.D. of the unsuccessful Tenderers will be refunded on announcing the result of the tenders through Cheque/Demand Draft. No interest is payable on the E.M.D. The E M D. of the successful Tenderer will be adjusted against payment to be made as consideration for the purchase of Sugar Factory and distillery.

12. If the Successful Tenderer fails to comply with any of the condition indicated above, the E.M.D. is liable to be forfeited.

13. The Tenderer should furnish latest Income Tax Clearance Certificate/Bankers Certificate as proof of the financial soundness of the Tenderer.

14. The list of the assets of the sugar plant and distillery unit are appended.

15. The Tender is only for outright sale and not for lease.

ಸರ್ಕಾರಿ ಕಟ್ಟಡವನ್ನು ಸರ್ಕಾರಿ ಜಮೀನಿನಲ್ಲಿ ಕಟ್ಟುವ ಬಗ್ಗೆ.

೪೧೩. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಕಂದಾಯ ಮತ್ತು ಯೋಜನಾ ಸಚಿವರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸರ್ಕಾರದ ಪಡ ಜಮೀನಿನಲ್ಲಿ ಸರ್ಕಾರದ ಕಟ್ಟಡ ಕಟ್ಟಲು ಜಮೀನಿನ ಮಂಜೂರಾತಿ ನೀಡುವಲ್ಲಿ ಅನುಸರಿಸುವ ನಿಯಮಗಳೇನು ?

(ಆ) ಈ ಬಗ್ಗೆ ಮಂಜೂರಾತಿ ನೀಡಲು ಅದರ ಕಿಮ್ಮತ್ತು ಹಣ ಕಟ್ಟಲು ಆದೇಶವಿದೆಯೇ ? ಹಾಗಿದ್ದಲ್ಲಿ, ಸರ್ಕಾರ ಕಟ್ಟಡ ಕಟ್ಟಲು ತೊಂದರೆಯಾಗುತ್ತಿಲ್ಲವೇ.

(ಇ) ಕಿಮ್ಮತ್ತಿನ ಹಣ ಇಲ್ಲದೆ ಸರ್ಕಾರಿ ಪಡ ಜಮೀನನ್ನು ಮಂಜೂರಾತಿ ನೀಡಲು ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

(ಅ) ಸರ್ಕಾರದ ಆದೇಶ ಸಂಖ್ಯೆ ಆರ್.ಡಿ. ೧೧ ಎಲ್‌ಜೆಡಬ್ಲ್ಯೂ ೬೨, ದಿನಾಂಕ ೨೦-೫-೧೯೬೧ ಹಾಗೂ ಅಧಿಸೂಚನೆ ಸಂಖ್ಯೆ ಆರ್.ಡಿ. ೪೯ ಎಲ್‌ಜಿಪಿ ೮೪, ದಿನಾಂಕ ೧೭-೬-೧೯೮೫ರಲ್ಲಿ ವಿಧಿಸಿರುವ ಷರತ್ತುಗಳ ಮೇರೆಗೆ ಸರ್ಕಾರದ ಜಮೀನನ್ನು, ಸರ್ಕಾರದ ಕಟ್ಟಡ ಕಟ್ಟಲು ಸಂಬಂಧಪಟ್ಟ ಸರ್ಕಾರದ ಇಲಾಖೆಗೆ ವರ್ಗಾವಣೆ ಮಾಡಲಾಗುತ್ತಿದೆ.

(ಆ) ಸರ್ಕಾರದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಸರ್ಕಾರದ ಕಟ್ಟಡ ಕಟ್ಟಲು ಜಮೀನು ವರ್ಗಾವಣೆ ಮಾಡುವಾಗ ಕಿಮ್ಮತ್ತು ಹಣವನ್ನು ಪಡೆಯುತ್ತಿಲ್ಲವಾದ್ದರಿಂದ, ಸರ್ಕಾರದ ಕಟ್ಟಡ ಕಟ್ಟಲು ಯಾವ ವಿಧವಾದ ತೊಂದರೆಯಾಗುತ್ತಿಲ್ಲ.

(ಇ) ಉದ್ಭವಿಸುವುದಿಲ್ಲ.

ಬಗರ್ ಹುಕುಂ ಸಾಗುವಳಿ ಮಂಜೂರಿ ಬಗ್ಗೆ.

೪೧೪. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೭೨ರ ಸರ್ಕಾರಿ ಆದೇಶದ ಅವಧಿ ಮುಗಿದ ನಂತರ ೧೯೮೫-೮೬ರ ಸಾಲಿನಲ್ಲಿ ಹೊಸದಾಗಿ ಸರ್ವೆ ನಂಬರ್‌ಗಳನ್ನು ಮಂಜೂರು ಮಾಡಲು ಸರ್ಕಾರದವರು ಆದೇಶ ನೀಡುವರೆ?

(ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನಲ್ಲಿ ಯಾವ ಯಾವ ಸರ್ವೆ ನಂಬರ್‌ನಲ್ಲಿ ಜಮೀನು ಮಂಜೂರಾಗಿರುವುದು ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ಸೇಂಧಿವನ, ಗೋಮಾಳ, ಗೋಕಟ್ಟೆ, ಬಗರ್ ಹುಕುಂ, ಖರಾಬು)

(ಇ) ಹಾಗಾದಲ್ಲಿ ಮಂಜೂರು ಮಾಡಲಾಗಿರುವ ಸರ್ವೆ ನಂಬರುಗಳು ಹಾಗೂ ಜಮೀನು ಪಡೆದವರ ವಿವರಗಳನ್ನು ಒದಗಿಸುವುದು.

ಶ್ರೀ ಎಸ್. ಆರ್. ಬೊವ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

(ಅ) ಇಲ್ಲ.

(ಆ) ಮತ್ತು (ಇ) ಮಧುಗಿರಿ ತಾಲ್ಲೂಕಿನ ಈ ಕೆಳಕಂಡ ಗ್ರಾಮಗಳ ಸರ್ವೆ ನಂಬರುಗಳಲ್ಲಿ ಜಮೀನು ಮಂಜೂರಾತಿ ಮಾಡಲಾಗಿದೆ.

	ಗ್ರಾಮ	ಸ.ನಂ.	ಜನಗಳು	ವಿಸ್ತೀರ್ಣ	ತರಹೆ
				ಎ.ಗು.	
೧.	ವೀರಣ್ಣನಹಳ್ಳಿ	೭ ಮತ್ತು ೮	೩೬	೩೬.೦೦	ಗೋಮಾಳ
೨.	ಕೊನ್ನಹಳ್ಳಿ	೩೮	೧೩	೩೬.೦೦	ಗೋಮಾಳ
೩	ತೇಯಂಬೂರು	೧೮	೨೬	೨೧.೩೫	ಗೋಮಾಳ
೪.	ಸುದ್ದೇಗುಂಟೆ	೫೬	೧೧	೧೭.೩೦	ಗೋಮಾಳ
೫.	ಅಣ್ಣೇನಹಳ್ಳಿ	೩೮	೨೬	೧೪.೧೧	ಗೋಮಾಳ
೬.	ಮಿಡಿತರಹಳ್ಳಿ	೧೯	೨೮	೨೩.೨೦	ಗೋಮಾಳ
೭.	ಪುಲುಮಗಟ್ಟಿ	೮೬	೪	೮.೨೫	ಸೇಂಧಿವನ
೮.	ಕೋಟಗಾನಹಳ್ಳಿ	೧೯	೧	೬.೦೦	ಸೇಂಧಿವನ

೧೯೮೭ನೇ ಸಾಲಿನಲ್ಲಿ ಹೊರದೇಶಕ್ಕೆ ತರಬೇತಿಗಾಗಿ ಕಳುಹಿಸಿದ ಬಗ್ಗೆ

೧೨. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಮಂತ್ರಿ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ೧೯೮೭ನೇ ಸಾಲಿನಲ್ಲಿ ತಹಶೀಲ್ದಾರರನ್ನು ತರಬೇತಿಗಾಗಿ ಹೊರದೇಶಕ್ಕಾಗಿ ಕಳುಹಿಸಿದ್ದುದು ನಿಜವೇ ?

(ಆ) ಹಾಗಿದ್ದಲ್ಲಿ ಅವರ ಸಂಖ್ಯೆ ಎಷ್ಟು ಹಾಗೂ ಆ ಪೈಕಿ, ಹರಿಜನ, ಗಿರಿಜನ ಕೋಮಿಗೆ ಸೇರಿದವರೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.